**ಅನುಬಂಧ–1**

**ವಸತಿ ಇಲಾಖೆ, ಕರ್ನಾಟಕ ಸರ್ಕಾರ**
**ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ**
**ರಾಜ್ಯ ಮಟ್ಟದ ಉಸ್ತುವಾರಿ ಸಂಸ್ಥೆ**

# ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ)

ಕೇಂದ್ರ ಸರ್ಕಾರವು ನಗರದ ಎಲ್ಲಾ ವಸತಿ ರಹಿತ ಕುಟುಬಗಳಿಗೆ 2022 ರ ಅವಧಿಯೊಳಗೆ ವಸತಿ ಸೌಲಭ್ಯ ಒದಗಿಸಲು ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ದಿನಾಂಕ 25.06.2018 ರಲ್ಲಿ ಜಾರಿಗೆ ತಂದಿದೆ. ಈ ಯೋಜನೆಯಡಿ ಈ ಕೆಳಕಂಡ 4 ಘಟಕಗಳಿದ್ದು, ಅರ್ಹ ಕುಟುಂಬಗಳು ಮನೆ ನಿರ್ಮಾಣ/ಖರೀದಿ/ಮರು ಖರೀದಿ/ ರಿಪೇರಿ/ ವಿಸ್ತರಣೆ ಗಾಗಿ ಈ ಯೋಜನೆಯಡಿ ಪ್ರಯೋಜನೆ ಪಡೆಯಬಹುದಾಗಿದೆ.

1. ಭೂಮಿಯನ್ನು ಸಂಪನ್ಮೂಲವಾಗಿ ಬಳಸಿ ಕೊಳಚೆ ಪ್ರದೇಶಗಳ ಅಭಿವೃದ್ಧಿ (In-situ slum redevelopment using land as resource).
2. ಕ್ರೇಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಮ್ (Credit Linked Subsidy scheme).
3. ಸಹಭಾಗಿತ್ವದಲ್ಲಿ ಧಾರಣೀಯ ವಸತಿ (Affordable Housing in Partnership) .
4. ಫಲಾನುಭವಿಗಳಿಂದ ಸ್ವಯಂ ನಿರ್ಮಾಣ/ ವಿಸ್ತರಣೆ (Beneficiaries Led Construction or enhancement)

**ಅರ್ಹತೆಯ ಮಾನದಂಡಗಳು:**

1. ನಗರ ಪ್ರದೇಶ/ ಪ್ಲಾನಿಂಗ್ ಏರಿಯಾ/ ಡೆವೆಲಪ್ ಮೆಂಟ್ ಏರಿಯಾ/ ಸ್ಪೇಷಲ್ ಏರಿಯಾ/ ಇಂಡಸ್ಟ್ರೀಯಲ್ ಏರಿಯಾ ಗಳಲ್ಲಿ ವಾಸಿಸುವ ಕುಟುಂಬಗಳು ಅರ್ಹರು
2. ಒಂದು ಕುಟುಂಬ ಅಂದರೆ ಗಂಡ ಹೆಂಡತಿ ಮತ್ತು ಮದುವೆಯಾಗದ ಮಕ್ಕಳು. ಕುಟುಂಬವು ದೇಶದ ಯಾವುದೇ ಭಾಗದಲ್ಲಿ ಸ್ವಂತ ಪಕ್ಕಾ ಮನೆ ಹೊಂದಿರಬಾರದು. ಕಚ್ಚಾ / ಅರೆ ಕಚ್ಚಾ ಮನೆ ಹೊಂದಿರುವ ಕುಟುಂಬಗಳು ಅರ್ಹರು.
3. ಕುಟುಂಬದ ವಯಸ್ಕ ಸದಸ್ಯರು (ಮದುವೆಯಾಗದ/ ಮದುವೆಯಾಗಿರುವ) ಕೂಡ ಅರ್ಹರು
4. ಕುಟುಂಬವು 21 ಚಮೀ ಗಿಂತ ಕಡಿಮೆ ವಿಸ್ತೀರ್ಣವಿರುವ ಪಕ್ಕಾ ಮನೆ ಹೊಂದಿದ್ದಲ್ಲಿ "ಫಲಾನುಭವಿಗಳಿಂದ ಸ್ವಯಂ ವಿಸ್ತರಣೆ" ಘಟಕದಡಿ ಅರ್ಹರು
5. ಕುಟುಂಬದ ವಾರ್ಷಿಕ ಆದಾಯದ ಮಿತಿ ಮತ್ತು ಆ ಕುಟುಂಬವು ನಿರ್ಮಿಸಬಹುದಾದ ಮನೆಯ ವಿಸ್ತೀರ್ಣ ಈ ಕೆಳಕಂಡಂತಿದೆ:

| ವರ್ಗ | ವಾರ್ಷಿಕ ಆದಾಯ | ಮನೆಯ ವಿಸ್ತೀರ್ಣ | ಷರಾ |
|---|---|---|---|
| ಬಿ.ಪಿ.ಎಲ್ | 87600/– ವರೆಗೆ | 30 sqmt | ಫಲಾನುಭವಿಯು ಅಗತ್ಯವಿದ್ದಲ್ಲಿ ಸ್ವಲ್ಪ ಹೆಚ್ಚು ವಿಸ್ತೀರ್ಣದ ಮನೆ ನಿರ್ಮಿಸಿಕೊಳ್ಳಬಹುದಾಗಿದೆ. |
| ಆರ್ಥಿಕ ಹಿಂದುಳಿದವರು | ರೂ. 87600 ರಿಂದ ರೂ. 3 ಲಕ್ಷದ ವರೆಗೆ | 30 sqmt | |
| ಎಲ್.ಐ.ಜಿ | ರೂ.3 ಲಕ್ಷ ದಿಂದ 6 ಲಕ್ಷದ ವರೆಗೆ | 60 Sqmt | |
| ಎಂ.ಐ.ಜಿ– 1 | ರೂ. 6 ಲಕ್ಷ ದಿಂದ 12 ಲಕ್ಷದ ವರೆಗೆ | 160 sqmt | |
| ಎಂ.ಐ.ಜಿ–2 | ರೂ.12 ಲಕ್ಷ ದಿಂದ 18 ಲಕ್ಷದವರೆಗೆ | 200 sqmt | |

ಸದರಿ ಯೋಜನೆಯನ್ನು ರಾಜ್ಯದ 271 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ರಾಜ್ಯದ ಪ್ರಾಯೋಜಕತ್ವ ಯೋಜನೆಗಳಾದ ವಾಜಪೇಯಿ ನಗರ, ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಹಾಗೂ ವಿಶೇಷ ವಸತಿ ಯೋಜನೆ, ಪೌರ ಕಾರ್ಮಿಕ ಗೃಹ ಭಾಗ್ಯ ಯೋಜನೆಗಳೊಂದಿಗೆ ಸಮನ್ವಯಗೊಳಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಸದರಿ ಯೋಜನೆಯ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತವು ರಾಜ್ಯ ಮಟ್ಟದ ಉಸ್ತುವಾರಿ ಸಂಸ್ಥೆಯಾಗಿ ನೇಮಕಗೊಳಿಸಿದೆ. ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ನಗರ ಸ್ಥಳೀಯ ಸಂಸ್ಥೆಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು, ಕರ್ನಾಟಕ ಗೃಹ ಮಂಡಳಿ, ಇತ್ಯಾದಿಗಳು ಅನುಷ್ಠಾನ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ.

**ಅನುದಾನದ ವಿವರಗಳು:**

ಫಲಾನುಭವಿಗಳಿಗೆ ವಸತಿ ಸೌಲಭ್ಯ ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒದಗಿಸುವ ಅನುದಾನದ ವಿವರಗಳು ಈ ಕೆಳಕಂಡಂತಿವೆ (ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಾಗೂ ವಾಜಪೇಯಿ ವಸತಿ ಯೋಜನೆ/ ಅಂಬೇಡ್ಕರ್ ವಸತಿ ಯೋಜನೆ ಸಮನ್ವಯತೆಯೊಂದಿಗೆ):

| Vertical | (Rs. In lakh) | | | | |
|---|---|---|---|---|---|
| | BPL | | | EWS | |
| | GoI | GoK | | GoI | GoK |
| | | SC/ST | General | | |
| ISSR | 1.00 | 2.00 | 1.20 | 1.00 | 0.00 |
| BLC –New | 1.5 | 2.00 | 1.20 | 1.5 | 0.00 |
| BLC –Enhancement | 1.5 | 0.00 | 0.00 | 1.5 | 0.00 |
| AHP | 1.5 | 2.00 | 1.20 | 1.5 | 0.00 |

**ಫಲಾನುಭವಿಗಳಿಂದ ಸ್ವಯಂ ನಿರ್ಮಾಣ/ ವಿಸ್ತರಣೆ:**

ಕುಟುಂಬವೊಂದು ನಿವೇಶನ ಹೊಂದಿದ್ದಲ್ಲಿ ಫಲಾನುಭವಿಯು ಸ್ವತಃ ಮನೆ ನಿರ್ಮಿಸಿಕೊಳ್ಳಲು ಅನುದಾನ ಒದಗಿಸಲಾಗುವುದು. ಒಂದು ವೇಳೆ 21 ಚಮೀ ಗಿಂತ ಕಡಿಮೆ ಕಾರ್ಪೆಟ್ ಏರಿಯಾ ಇರುವ ಪಕ್ಕಾ ಮನೆ ಹೊಂದಿರುವ ಕುಟುಂಬವು ಒಂದು ಕೋಣೆ ಅಥವಾ ಒಂದು ಅಡುಗೆ ಮನೆ ಅಥವಾ ಕೋಣೆ, ಸ್ನಾನದ ಮನೆ, ಶೌಚಾಲಯ ಅಥವಾ ಅಡುಗೆ ಮನೆ, ಸ್ನಾನದ ಮನೆ ಶೌಚಾಲಯ ಹೀಗೆ ವಿವಿಧ ಸಂಯೋಜನೆ ಯೊಂದಿಗೆ ಕನಿಷ್ಠ 9 ಚಮೀ ವಿಸ್ತೀರ್ಣದ ನಿರ್ಮಾಣ ಕೈಗೊಳ್ಳಲು ಕೇಂದ್ರ ಸರ್ಕಾರವು 1.5 ಲಕ್ಷ ಅನುದಾನ ನೀಡುವುದು. ಫಲಾನುಭವಿಗಳಿಗೆ ಅನುದಾನವನ್ನು ಜಿಪಿಎಸ್ ಆಧಾರಿತ ಪ್ರಗತಿಯನ್ನು ಆಧರಿಸಿ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಬಿಡುಗಡೆ ಮಾಡಲಾಗುವುದು.

ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಯೋಜನೆಯಡಿ ಇ.ಡಬ್ಲ್ಯೂ.ಎಸ್, ಎಲ್.ಐ.ಜಿ, ಎಂ.ಐ.ಜಿ ವರ್ಗದ ಕುಟುಂಬಗಳಿಗೆ ಮನೆಗಳ ನಿರ್ಮಾಣಕ್ಕಾಗಿ ಬ್ಯಾಂಕ್‌ಗಳು ಸಾಲ ಸೌಲಭ್ಯ ಒದಗಿಸುತ್ತಿದ್ದು ಕೇಂದ್ರ ಸರ್ಕಾರವು ಬಡ್ಡಿ ಸಹಾಯಧನ ಒದಗಿಸಲಿದೆ.

| Items | EWS | LIG | MIG-1 | MIG-2 |
|---|---|---|---|---|
| Income limit (Per Annam) | up to 3.00 lakh | 3.01 to 6.00 lakh | 6.01 lakh to 12 lakh | 12.01 lakh to 18 lakh |
| Carpet Area: (Sqmt) | up to 30 | up to 60 | 160 sqmt | 200 sqmt |
| Loan amount (max) | 6.00 lakh | 6.00 lakh | 9.00 lakh | 12.00 lakh |
| Loan period | 20 Year | 20 Year | 20 year | 20 year |
| Interest subsidy (Per Annam) | 6.5% | 6.5% | 4 % | 3 % |
| Interest subsidy amount | 2.67 lakh | 2.67lakh | 2.35 lakh | 2.30 lakh |
| Incentive to bank in lieu of Loan processing fee | 3000 | 3000 | 2,000 | 2,000 |
| Additional loan | Additional loan beyond limit will be at non subsidized rate | | | |

**ಸಹಭಾಗಿತ್ವದಲ್ಲಿ ಧಾರಣೀಯ ವಸತಿ:**

ನಿವೇಶನ ರಹಿತ ಕುಟುಂಬಗಳಿಗೆ ಅನುಷ್ಠಾನ ಸಂಸ್ಥೆಗಳು ಸರ್ಕಾರಿ ಜಮೀನುಗಳಲ್ಲಿ ಮೂಲಭೂತ ಸೌಕರ್ಯಗಳೊಂದಿಗೆ ಮನೆಗಳನ್ನು ನಿರ್ಮಿಸಿ ಬಡ ಕುಟುಂಬಗಳಿಗೆ ಹಂಚಿಕೆ ಮಾಡುತ್ತವೆ. ಮನೆ ನಿರ್ಮಾಣದ ಘಟಕ ವೆಚ್ಚದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲಿನ ಮೊತ್ತ ಹೊರತು ಪಡಿಸಿ ಬಾಕಿ ಮೊತ್ತವನ್ನು ಫಲಾನುಭವಿಗಳು ಉಳಿತಾಯದ ಮೊತ್ತದಿಂದ /ಬ್ಯಾಂಕ್ ಸಾಲದ ಮೂಲಕ ಭರಿಸಬೇಕಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

- ಕ್ರೇಡಿಟ್ ಲಿಂಕ್ಡ್ ಸಬ್ಸಿಡಿ ಸ್ಕೀಮ್ ಅಡಿ ಪ್ರಯೋಜನೆ ಪಡೆಯಲು ಬ್ಯಾಂಕ್‌ಗಳಿಗೆ ಭೇಟಿ ನೀಡಬಹುದಾಗಿದೆ.
- ಸಹಭಾಗಿತ್ವದಲ್ಲಿ ಧಾರಣೀಯ ವಸತಿ (AHP) ಮತ್ತು ಫಲಾನುಭವಿಗಳಿಂದ ಸ್ವಯಂ ನಿರ್ಮಾಣ/ ವಿಸ್ತರಣೆ (BLC- New or enhancement) ಅಡಿ ಪ್ರಯೋಜನೆ ಪಡೆಯಲು ನಗರ ಸ್ಥಳೀಯ ಸಂಸ್ಥೆಗೆ ಭೇಟಿ ನೀಡಬಹುದಾಗಿದೆ.
- ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ವೆಬ್ ಸೈಟ್ ನ್ನು ಸಂಪರ್ಕಿಸಬಹುದಾಗಿದೆ.
  http://mohua.gov.in/cms/hfaguidelinesmanagement.php
  https:// ashraya.karnataka.gov.in